ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ದೇವರಾಜ ಅರಸ್ ಮಾರ್ಕೆಟ್, ಹಾಸನ. ☎ 264825

ವಾರ್ಷಿಕ ಬಡ್ಡಿ ದರದ ವಿವರಗಳು	ಸಾಮಾನ್ಯರಿಗೆ %	ಹಿರಿಯ ನಾಗರಿಕರಿಗೆ %
* 1 ವರ್ಷದಿಂದ 3 ವರ್ಷಗಳವರೆಗೆ	10.5	11
* 181ದಿನಗಳಿಂದ 365 ದಿನಗಳವರೆಗೆ	8	8.5
* 91 ದಿನಗಳಿಂದ 180 ದಿನಗಳವರೆಗೆ	7	7.5
* 31 ದಿನಗಳಿಂದ 90 ದಿನಗಳವರೆಗೆ	6	6.5
* 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ		

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ
ವ್ಯವಸ್ಥಾಪಕ ಸಂಪಾದಕ :ಎಸ್.ಎನ್.ಮಂಜುನಾಥದತ್ತ

PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Controller Water Purifier & Water Softner

ಜನತಾಮಾಧ್ಯಮ ಬೆಳಗಿನ ದೈನಿಕ JANATHAMADHYAMA KARKAN. RNI 41566. ಸಂಪುಟ : 41 ಸಂಚಿಕೆ :24 ಗುರುವಾರ ನ.30, 2017 ದೂರವಾಣಿ : 268494 ಪುಟ-4 ರೂ.2-00 NO. HSN-761/ 2015-17

ಕಾಂಗ್ರೆಸ್ ದೇಶಕ್ಕೆ ದೊಡ್ಡ ಹೊರೆ

ಗುಜರಾತ್ ಚುನಾವಣಾ ಪ್ರಚಾರ ರ‍್ಯಾಲಿಯಲ್ಲಿ ಪ್ರಧಾನಿ ಮೋದಿ

ಅಹಮದಾಬಾದ್ : ಗುಜರಾತ್ ವಿಧಾನಸಭಾ ಚುನಾವಣೆಯ ಪ್ರಚಾರದ ಅಂಗವಾಗಿ ಪ್ರಾಚಿಯಲ್ಲಿ ಬುಧವಾರ ನಡೆದ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ತಮ್ಮ ಭಾಷಣದುದ್ದಕ್ಕೂ ಕಾಂಗ್ರೆಸ್ ಮೇಲೆ ಕಿಡಿಕಾರಿದರಲ್ಲದೆ, ಕಾಂಗ್ರೆಸ್ ದೇಶಕ್ಕೆ ದೊಡ್ಡ ಹೊರೆಯಾಗಿದೆ, ಅಲ್ಲಿ ನೇತಾರನೂ ಇಲ್ಲ ನೀತಿಯೂ ಇಲ್ಲ ಎಂದು ಟೀಕಿಸಿದರು.

ಕಾಂಗ್ರೆಸ್ ಒಬಿಸಿ ಸಮುದಾಯದವರಲ್ಲಿ ಮತ ಕೇಳುತ್ತಿದೆ. ಆದರೆ ಇಷ್ಟು ವರ್ಷಗಳ ಕಾಲ ಕಾಂಗ್ರೆಸ್ ಒಬಿಸಿ ಆಯೋಗಕ್ಕೆ ಸಾಂವಿಧಾನಿಕ ಸ್ಥಾನಮಾನ ಲಭಿಸುವಂತೆ ಮಾಡದೇ ಇದ್ದುದು ಯಾಕೆ? ನಾವು ಅದಕ್ಕಾಗಿ ಶ್ರಮಿಸಿದೆವು. ಲೋಕಸಭೆಯಲ್ಲಿ ಅದಕ್ಕೆ ಅನುಮತಿ ಸಿಕ್ಕರೂ ಕಾಂಗ್ರೆಸ್ ಬಹುಮತವಿರುವ ರಾಜ್ಯಸಭೆಯಲ್ಲಿ ಅದಕ್ಕೆ ಅನುಮತಿ ಸಿಕ್ಕಿಲ್ಲ ಎಂದರು.

ನಾವು ಏನೇ ಯೋಜನೆಗಳನ್ನು ಮಾಡಿದರೂ ಕಾಂಗ್ರೆಸ್ ಅದಕ್ಕೆ ಅಡ್ಡಿಪಡಿಸುತ್ತಲೇ ಇರುತ್ತದೆ. ಸಂಸತ್‌ನಲ್ಲಿ ನಾವು ಶೀಘ್ರದಲ್ಲೇ ಸಭೆ ಸೇರಲಿದ್ದು , ಈ ವಿಷಯವನ್ನು ಮತ್ತೆ ಚರ್ಚೆಗೆ ತರಲಾಗುವುದು. ನಾನು ಒಬಿಸಿ ಸಮುದಾಯಕ್ಕೆ ಸಾಂವಿಧಾನಿಕ ಸ್ಥಾನಮಾನ ನೀಡಲು ಬಯಸುತ್ತೇನೆ ಎಂದರು.

70 ವರ್ಷಗಳ ಕಾಲ ದೇಶವನ್ನು ಲೂಟಿ ಮಾಡಿದವರಿಗೆ ನನ್ನ ಅಧಿಕಾರವನ್ನು ಅರಗಿಸಿಕೊಳ್ಳಲು ಆಗುತ್ತಿಲ್ಲ. ಕಾಂಗ್ರೆಸ್ ಸೇನೆಯನ್ನು ವಿರೋಧಿಸುತ್ತಿರುವುದು ಯಾಕೆ ಎಂದು ಪ್ರಧಾನಿ ಮೋದಿ ಪ್ರಶ್ನಿಸಿದರು.

ಪ್ರಾಧಿಕಾರದ ವಿರುದ್ಧ ಪ್ರತಿಭಟನೆ

ಹಾಸನ : ನಗರದ ಎಸ್.ಎಂ.ಕೃಷ್ಣನಗರ ಬಡಾವಣೆಯಲ್ಲಿ ಎಸ್.ಸಿ./ ಎಸ್.ಟಿ. ಹಾಗೂ ಓ.ಬಿ.ಸಿ. ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡಿದ್ದು, ನಿವೇಶನದಾರರಿಂದ ಅತೀ ಹೆಚ್ಚು ಹಣ ವಸೂಲಿ ಮಾಡಲಾಗಿದೆ ಎಂದು ಆರೋಪಿಸಿ ಯುವ ದಲಿತ ಸಂಘರ್ಷ ಸಮಿತಿ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಹೇಮಾವತಿ ಪ್ರತಿಮೆ ಬಳಿಯಿಂದ ಮೆರವಣಿಗೆ ಹೊರಟ ಪ್ರತಿಭಟನಾಕಾರರು, ನಗರಾಭಿವೃದ್ಧಿ ಪ್ರಾಧಿಕಾರ ಕಚೇರಿಗೆ ಆಗಮಿಸಿ ಕೆಲ ಕಾಲ ಧರಣಿ ನಡೆಸಿದರು.

ನಗರಾಭಿವೃದ್ಧಿ ಪ್ರಾಧಿಕಾರದಿಂದ ಎಸ್.ಎಂ.ಕೃಷ್ಣನಗರ ಬಡಾವಣೆಯ ನಿವೇಶನಗಳನ್ನು ಹಂಚಿಕೆ ಮಾಡಿದ್ದು, ನಿವೇಶನ ಪಡೆದಿರುವ ಫಲಾನುಭವಿಗಳಿಗೆ ತಿಳಿವಳಿಕೆ ಪತ್ರವನ್ನು ನೀಡಿ 3 ತಿಂಗಳ ಒಳಗೆ ಪೂರ್ತಿ ಹಣವನ್ನು ಪಾವತಿ ಮಾಡಬೇಕು. ಇಲ್ಲವಾದಲ್ಲಿ ಬಡ್ಡಿಸಮೇತ ಹಣ ಪಾವತಿಸಬೇಕೆಂದು ತಿಳಿಸಲಾಗಿದೆ. ಇದರಿಂದ ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಆರೋಪಿಸಿದರು. *(-4ನೇ ಪುಟಕ್ಕೆ)*

ಜಿಲ್ಲಾ ವಕ್ಫ್ ಬೋರ್ಡ್ ಅಧ್ಯಕ್ಷರ ವಜಾಕ್ಕೆ ಆಗ್ರಹ

ಹಾಸನ : ವಕ್ಫ್ ಬೋರ್ಡ್‌ನ ಅಧಿಕಾರ, ಕಾರ್ಯ ವೈಖರಿಗಳನ್ನು ಅರಿಯದ ಹಾಗೂ ಜನರ ಸಮಸ್ಯೆಗಳಿಗೆ ಸ್ಪಂದಿಸದ ಜಿಲ್ಲಾ ವಕ್ಫ್ ಬೋರ್ಡ್ ಅಧ್ಯಕ್ಷರನ್ನು ವಜಾಗೊಳಿಸುವಂತೆ ಆಗ್ರಹಿಸಿ ಆಮ್ ಆದ್ಮಿ ಪಕ್ಷದ ಸದಸ್ಯರು ಬುಧವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಜಿಲ್ಲಾ ವಕ್ಫ್ ಬೋರ್ಡ್‌ನ ಆಡಳಿತ ಅವಧಿಯಲ್ಲಿ ಸಾಕಷ್ಟು ಅಕ್ರಮಗಳು ನಡೆದಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಗೂಂಡಾ ವರ್ತನೆ, ಅಮಾಯಕ ಜನರ ದಾರಿ ತಪ್ಪಿಸುವುದು, ಅಧಿಕಾರದ ದುರುಪಯೋಗ ನಡೆಯುತ್ತಿದೆ. ಜಿಲ್ಲಾ ವಕ್ಫ್ ಬೋರ್ಡ್‌ನ ಆಡಳಿತ ವೈಫಲ್ಯದ ಬಗ್ಗೆ ರಾಜ್ಯ ವಕ್ಫ್ ಬೋರ್ಡ್ ಈಗಾಗಲೇ ಶೋಕಾಸ್ ನೋಟಿಸ್ ಜಾರಿ ಮಾಡಿದೆ ಎಂದು ಧರಣಿನಿರತರು ದೂರಿದರು. *(-4ನೇ ಪುಟಕ್ಕೆ)*

ಗ್ರಾಹಕರಲ್ಲಿ ಕಣ್ಣೀರು ತರಿಸುತ್ತಿರುವ ಈರುಳ್ಳಿ

 ವೆಂಕಟೇಶ್

ಹಾಸನ : ಅಡುಗೆಗೆ ಈರುಳ್ಳಿ ಬೇಕೇ ಬೇಕು. ಬಹುತೇಕರು ಈರುಳ್ಳಿ ಬಳಸುತ್ತಾರೆ. ಅಡುಗೆಗೆ ರುಚಿ ಕೊಡುವ ಈರುಳ್ಳಿ ಈಗ ಗ್ರಾಹಕರಿಗೆ ಬಿಸಿಯಾಗಿ ಪರಿಣಮಿಸಿದೆ. ಬೆಲೆ ಏರಿಕೆಯಿಂದ ಕಣ್ಣೀರು ತರಿಸುತ್ತಿದೆ.

ಕಳೆದ 20 ದಿವಸದಿಂದಲೂ ಈರುಳ್ಳಿ ಬೆಲೆ ಏರುತ್ತಲೇ ಇದೆ. ಉತ್ತಮ ದರ್ಜೆಯ ಈರುಳ್ಳಿ ಕೆ.ಜಿ.ಗೆ 60 ರಿಂದ 70 ರೂ. ಇದೆ. ಎ.ಪಿ.ಎಂ.ಸಿ. ಮಾರುಕಟ್ಟೆಯಲ್ಲಿಯೂ ಕೂಡ 50 ರೂ.ನಿಂದ 60 ರೂ. ದರ ಇದೆ. ಮುಂಬರುವ ದಿನಗಳಲ್ಲಿ ಬೆಲೆ ಇನ್ನೂ ಹೆಚ್ಚಾದರೂ ಅಚ್ಚರಿಪಡಬೇಕಾಗಿಲ್ಲ.

ಈ ಬಾರಿ ಉತ್ಪಾದನೆ ತೀರಾ ಕುಸಿತ ಕಂಡಿದೆ. ಬೇಡಿಕೆಯೇನೂ ಜಾಸ್ತಿಯಾಗಿಲ್ಲ, ಆದರೆ ಮಹಾರಾಷ್ಟ್ರ, ಮಧ್ಯ ಪ್ರದೇಶದಿಂದ ಈರುಳ್ಳಿ ಇಲ್ಲಿಯ ಮಾರುಕಟ್ಟೆಗೆ ಬರುತ್ತಿಲ್ಲ. ಹಾಗಾಗಿ ಈರುಳ್ಳಿ ದರದಲ್ಲಿ ಏರುಪೇರಾಗಿದೆ.

ಹವಾಮಾನ ವೈಪರೀತ್ಯದಿಂದ ಬೆಲೆ ನೆಲಕಚ್ಚಿತು. ಈರುಳ್ಳಿ ಬೆಳೆಗಾರರು ಈಗ ದಯನೀಯ ಸ್ಥಿತಿಯಲ್ಲಿದ್ದಾರೆ. ಎಂಥದೇ ಸ್ಥಿತಿ ಎದುರಾದರೂ ಅಡುಗೆಗೆ ಈರುಳ್ಳಿ ಬೇಕೇ ಬೇಕು.

ಈಗ್ಗೆ ಹಲವು ವರ್ಷಗಳ ಹಿಂದೆ ಈರುಳ್ಳಿ ಬೆಲೆ ಗಗನಕ್ಕೇರಿತ್ತು. ಕೆ.ಜಿ.ಗೆ 100 ರೂಪಾಯಿ ಆಗಿರುವ ಉದಾಹರಣೆಯೂ ಇದೆ. ಕರ್ನಾಟಕಕ್ಕಿಂತ ಉತ್ತರ ಭಾರತದಲ್ಲಿ ವಿಪರೀತವಾಗಿ ಈರುಳ್ಳಿ ಬಳಸುತ್ತಾರೆ. ಈರುಳ್ಳಿ ಬೆಲೆ ಏರಿಕೆಯಿಂದ ಆಗ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧವೂ ಜನರು ಆಕ್ರೋಶ ವ್ಯಕ್ತಪಡಿಸಿ ಬೀದಿಗಿಳಿದಿದ್ದರು.

ಈ ವರ್ಷವೂ ಅದೇ ಸ್ಥಿತಿ ನಿರ್ಮಾಣವಾಗುವುದೇ ಎಂಬ ಆತಂಕ ಎಲ್ಲರಲ್ಲಿದೆ. ಆದರೆ ಇದನ್ನು ಈರುಳ್ಳಿ ವರ್ತಕರ ಸಮೂಹ ಅಲ್ಲಗಳೆಯುತ್ತದೆ. ಅಂಥದ್ದೇನೂ ತೊಂದರೆ ಇಲ್ಲ. ಇನ್ನೊಂದು ತಿಂಗಳಲ್ಲಿ ಎಲ್ಲವೂ ಸರಿಯಾಗಲಿದೆ ಎಂದು ಹೇಳುತ್ತಾರೆ. ಇವೆಲ್ಲಾ ಏನೇ ಇರಲಿ, ಈರುಳ್ಳಿ ಬೆಲೆ ಏರಿಕೆ ಕಂಡಿರುವುದು ಗ್ರಾಹಕರನ್ನು ಚಿಂತೆಗೀಡು ಮಾಡಿದೆ.

> ಈರುಳ್ಳಿ ಬೆಲೆ ಹೆಚ್ಚಿದೆ. ನಮ್ಮ ಜಿಲ್ಲೆಯಲ್ಲಿ ಹೆಚ್ಚು ಈರುಳ್ಳಿ ಬೆಳೆಯುವುದಿಲ್ಲ. ಬೇರೆ ಬೇರೆ ಭಾಗಗಳಿಂದ ನಮ್ಮ ಮಾರುಕಟ್ಟೆಗೆ ಬರುತ್ತಿದೆ. ಈರುಳ್ಳಿಗೆ ಅಭಾವವೇನೂ ಇಲ್ಲ. ಬೆಲೆ ಜಾಸ್ತಿಯಾಗಿದೆ.
>
> *-ಉಪ ನಿರ್ದೇಶಕರು (ಪ್ರಭಾರಿ), ತೋಟಗಾರಿಕೆ ಇಲಾಖೆ.*

> 15-20 ದಿವಸದಲ್ಲಿ ಎಲ್ಲವೂ ಸರಿಯಾಗುತ್ತದೆ. ಇದಕ್ಕೇನೂ ಆತಂಕಪಡುವ ಅಗತ್ಯ ಇಲ್ಲ. -ಗೋಪಾಲ್, ವರ್ತಕರು.

41 ಹೆಕ್ಟೇರ್‌ನಲ್ಲಿ ಮಾತ್ರ ಬೆಳೆ

ಜಿಲ್ಲೆ ಆಲೂಗೆಡ್ಡೆಗೆ ಹೆಸರುವಾಸಿ. ಆದರೆ ಈಗ ಆಲೂಗೆಡ್ಡೆ ಬೆಳೆ ರೈತರ ಕೈ ಹಿಡಿಯುತ್ತಿಲ್ಲ. ಮುಂದಿನ ವರ್ಷ ಆಲೂಗೆಡ್ಡೆ ಬೆಳೆಯಕೂಡದು. ನಿಷೇಧ ಹೇರಿದರೂ ಒಳ್ಳೆಯದೆ.

ಇನ್ನು ಜಿಲ್ಲೆಯಲ್ಲಿ 41 ಹೆಕ್ಟೇರ್‌ನಲ್ಲಿ ಮಾತ್ರ ಈರುಳ್ಳಿ ಬೆಳೆಯಲಾಗುತ್ತಿದೆ. ಹೊಳೆನರಸೀಪುರ ಮತ್ತು ಅರಸೀಕೆರೆ ತಾಲ್ಲೂಕು ಹೊರತುಪಡಿಸಿದರೆ ಉಳಿದಂತೆ ಬೇರೆಡೆ ಬೆಳೆ ಬೆಳೆಯುವುದೇ ಇಲ್ಲ. ವರ್ಷಕ್ಕೆ ಎರಡು ಬಾರಿ ಈರುಳ್ಳಿ ಬೆಳೆಯಬಹುದು.

ಉತ್ತರ ಕರ್ನಾಟಕದಲ್ಲಿ ಹೆಚ್ಚು

ಉತ್ತರ ಕರ್ನಾಟಕದಲ್ಲಿ ಈರುಳ್ಳಿಯನ್ನು ಹೆಚ್ಚು ಬೆಳೆಯುತ್ತಾರೆ. ಗದಗ, ಬಾಗಲಕೋಟೆ, ವಿಜಯಪುರ, ಹುಬ್ಬಳ್ಳಿ, ಧಾರವಾಡ ಈ ಭಾಗದಲ್ಲಿ ಬೆಳೆ ಹೆಚ್ಚು. ಆದರೆ ಈ ವರ್ಷ ಅಲ್ಲಿಯೂ ಕೂಡ ಈರುಳ್ಳಿ ಕೈ ಕೊಟ್ಟಿದೆ.

ಚಿತ್ರದುರ್ಗ, ಚಳ್ಳಕೆರೆಯಲ್ಲಿ ಬೆಳೆಯುವ ಈರುಳ್ಳಿಯನ್ನು ಬೆಂಗಳೂರು ಮಾರುಕಟ್ಟೆ ಆಕರ್ಷಿಸುತ್ತದೆ. ಬಹುಪಾಲು ರೈತರು ಬೆಂಗಳೂರಿಗೆ ಕೊಂಡೊಯ್ಯುತ್ತಾರೆ. ನಮ್ಮ ಜಿಲ್ಲೆಗೆ ಜಾವಗಲ್, ಕಡೂರು, ಬೀರೂರು, ಅಜ್ಜಂಪುರ ಹಾಗೂ ಅರಸೀಕೆರೆಯಿಂದ ಈರುಳ್ಳಿ ಆವಕವಾಗುತ್ತದೆ.

ಈರುಳ್ಳಿ ದಾಸ್ತಾನು ಇಲ್ಲಿಲ್ಲ

ಬಿತ್ತನೆ ಆಲೂಗೆಡ್ಡೆ ದಾಸ್ತಾನಿಗೆ ಇಲ್ಲಿ ಶೈತ್ಯಾಗಾರಗಳಿವೆ. ಆದರೆ ಈರುಳ್ಳಿಯನ್ನು ದಾಸ್ತಾನು ಮಾಡಲು ವ್ಯವಸ್ಥೆ ಇಲ್ಲಿಲ್ಲ. ವಿಪರ್ಯಾಸ ಸಂಗತಿ ಎಂದರೆ, ತೋಟಗಾರಿಕೆ ಇಲಾಖೆಗಾಗಲೀ, ಎಪಿಎಂಸಿ ಅವರಿಗಾಗಲೀ ಈರುಳ್ಳಿ ದಾಸ್ತಾನು ಎಷ್ಟಿದೆ? ಬೇಡಿಕೆ ಎಷ್ಟು? ಈ ಬಗೆಗೆ ಮಾಹಿತಿಯೇ ಇಲ್ಲ.

ತೋಟಗಾರಿಕೆ ಇಲಾಖೆಯವರು, ಈರುಳ್ಳಿ ದಾಸ್ತಾನು ಇತ್ಯಾದಿ ಬಗ್ಗೆ ಎ.ಪಿ.ಎಂ.ಸಿ.ಯವರಿಗೆ ಮಾಹಿತಿ ಇರುತ್ತದೆ ಎಂದು ಒದರುತ್ತಾರೆ. ಆದರೆ ಎ.ಪಿ.ಎಂ.ಸಿ.ಯಲ್ಲಿ ಈ ಬಗ್ಗೆ ಯಾವುದೇ ಮಾಹಿತಿ ಇಲ್ಲ.

ಕೆ.ಜಿ. ಈರುಳ್ಳಿಗೆ 50 ರೂ. ದರ ಇದೆ. ಪ್ರತಿನಿತ್ಯವೂ 8 ರಿಂದ 10 ಲೋಡ್ ಮಾರುಕಟ್ಟೆಗೆ ಆವಕವಾಗುತ್ತದೆ ಎಂದು ಎ.ಪಿ.ಎಂ.ಸಿ. ಮೂಲಗಳು ಸ್ಪಷ್ಟಪಡಿಸುತ್ತವೆ. ನಗರದಿಂದ ಕೊಡಗು, ಶನಿವಾರಸಂತೆ, ಅರಕಲಗೂಡು, ಪುತ್ತೂರು, ಬೆಳ್ತಂಗಡಿ ಈ ಭಾಗಗಳಿಗೆ ಈರುಳ್ಳಿ ಪೂರೈಕೆಯಾಗುತ್ತಿದೆ. ಇಲ್ಲಿಯ ಮಾರುಕಟ್ಟೆ ಕೂಡ ಪ್ರಮುಖ ಕೇಂದ್ರ.

ಮಹಾರಾಷ್ಟ್ರ ನಂ.1

ದೇಶದಲ್ಲಿ ಮಹಾರಾಷ್ಟ್ರದಲ್ಲಿ ಯಥೇಚ್ಚವಾಗಿ ಈರುಳ್ಳಿ ಬೆಳೆಯುತ್ತಾರೆ. ನಂಬರ್ 1 ಸ್ಥಾನ ಮಹಾರಾಷ್ಟ್ರಕ್ಕಿದೆ. ನಂತರ ಮಧ್ಯ ಪ್ರದೇಶ ಈ ಸ್ಥಾನ ಆಕ್ರಮಿಸಿಕೊಂಡಿದೆ. ಆಲೂಗೆಡ್ಡೆಗೆ ಉತ್ತರ ಪ್ರದೇಶ ಹಾಗೂ ಪಶ್ಚಿಮ ಬಂಗಾಳ ಹೆಚ್ಚು ಹೆಸರುವಾಸಿ. ಆದರೆ ಈರುಳ್ಳಿಗೆ ಮಾತ್ರ ಮಹಾರಾಷ್ಟ್ರವೇ ಟಾಪ್.

ಮಹಾರಾಷ್ಟ್ರದ ಮುಂಬೈ ಮತ್ತು ಪುಣೆ ದೊಡ್ಡ ಮಾರುಕಟ್ಟೆಯನ್ನು ಹೊಂದಿವೆ. ಈ ಮಾರುಕಟ್ಟೆಗಳಿಂದ ದುಬೈ, ಅರಬ್ ದೇಶಗಳಿಗೆ ಈರುಳ್ಳಿ ರಫ್ತು ಆಗುತ್ತದೆ. ಆದರೆ ಈ ವರ್ಷ ಮಹಾರಾಷ್ಟ್ರದಲ್ಲಿ ವಿಪರೀತ ಮಳೆಯಾಗಿದ್ದರಿಂದ ಈರುಳ್ಳಿ ಬೆಳೆಗೆ ಹೊಡೆತ ಬಿದ್ದಿದೆ. ಬೇಡಿಕೆ ಹೆಚ್ಚಾಗಿದ್ದು , ಉತ್ಪಾದನೆ ಕಡಿಮೆ ಇದೆ. ಹಾಗಾಗಿ ಸಮಸ್ಯೆ ಧುತ್ತೆಂದು ಉದ್ಭವವಾಗಿದೆ.

ಉತ್ತರ ಕರ್ನಾಟಕ, ಮಹಾರಾಷ್ಟ್ರದಲ್ಲಿ ಈರುಳ್ಳಿಯನ್ನು ತಿಂಗಳುಗಟ್ಟಲೆ ದಾಸ್ತಾನು ಮಾಡುತ್ತಾರೆ. ಅವರು ಕೆಲವು ಮಾದರಿಗಳನ್ನು ಕಂಡುಕೊಂಡಿದ್ದಾರೆ. ಆದರೆ ನಮ್ಮ ಜಿಲ್ಲೆಯಲ್ಲಿ ಅಂಥ ವ್ಯವಸ್ಥೆಯೇ ಇಲ್ಲ.

ಗುದ್ದಲಿ ಪೂಜೆಯಾದರೂ ಆರಂಭವಾಗದ ರಸ್ತೆ ಕಾಮಗಾರಿ

ಹಾಸನ : ಎರಡು ವರ್ಷಗಳ ಹಿಂದೆಯೇ ರಸ್ತೆ ಕಾಮಗಾರಿ ಆರಂಭಿಸಲು ಸ್ವತಃ ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು ಅವರೇ ಗುದ್ದಲಿ ಪೂಜೆ ನೆರವೇರಿಸಿದ್ದರೂ ರಸ್ತೆ ಕಾಮಗಾರಿ ನೆನೆಗುದಿಗೆ ಬಿದ್ದು ಜನರು ಪರದಾಡುತ್ತಿರುವ ಪ್ರಸಂಗ ಅರಕಲಗೂಡು ತಾಲ್ಲೂಕಿನ ಮಲ್ಲಿಪಟ್ಟಣ ಹೋಬಳಿಯ ಹೊಳಲಗೂಡು ಗ್ರಾಮ ಪಂಚಾಯತ್ ವ್ಯಾಪ್ತಿಯ ತಾವರೆಕೆರೆ ಕೊಪ್ಪಲಿನಲ್ಲಿ ಕಂಡು ಬಂದಿದೆ.

ತಾವರೆಕೆರೆ ಕೊಪ್ಪಲಿನಿಂದ ಮುಖ್ಯ ರಸ್ತೆಗೆ ಒಂದು ಕಿಲೋ ಮೀಟರ್ ಅಂತರವಿದ್ದು, ಈ ರಸ್ತೆಯ ಕಾಮಗಾರಿ ಕನಸಾಗಿಯೇ ಉಳಿದಿದೆ. ಈ ರಸ್ತೆಯು 60 ಕುಟುಂಬಗಳಿರುವ ತಾವರೆಕೆರೆ ಕೊಪ್ಪಲಿನ ಗ್ರಾಮಸ್ಥರಿಗೆ ಮುಖ್ಯ ಹೆದ್ದಾರಿ ಎಂದರೆ ತಪ್ಪಲ್ಲ. ಪ್ರತಿನಿತ್ಯ ಶಾಲಾ ಮಕ್ಕಳು, ಮಹಿಳೆಯರು, ವಯೋವೃದ್ಧರು ಈ ರಸ್ತೆಯಲ್ಲಿ ನಡೆದಾಡಲು ಹರಸಾಹಸ ಪಡುತ್ತಿದ್ದಾರೆ ಎಂದು ಜನತೆ ದೂರಿದ್ದಾರೆ.

ಮಳೆಗಾಲದಲ್ಲಿ ಕೆಸರುಗದ್ದೆಯಂತಾಗುವ ಈ ರಸ್ತೆಯಲ್ಲಿ ಪಾದಚಾರಿಗಳು, ವಾಹನ ಸವಾರರು ನರಕ ಯಾತನೆ ಅನುಭವಿಸುತ್ತಿದ್ದಾರೆ. ಈ ಬಗ್ಗೆ ಸಂಬಂಧಿಸಿದ ಗ್ರಾಮ ಪಂಚಾಯಿತಿ ಹಾಗೂ ಅರಕಲಗೂಡು ತಾಲ್ಲೂಕು ಪಂಚಾಯಿತಿ ಅಧಿಕಾರಿಗಳು ಕಣ್ಣಿದ್ದರೂ ಕುರುಡರಂತೆ ವರ್ತಿಸುತ್ತಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರೇ ಬಂದು ರಸ್ತೆ ಕಾಮಗಾರಿಗೆ ಚಾಲನೆ ನೀಡಿರುವುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಪರಿಸ್ಥಿತಿ ಹೀಗಿದ್ದರೂ ಅಧಿಕಾರಿಗಳು ಸಚಿವರ ಆದೇಶ ಮತ್ತು ಸೂಚನೆಯನ್ನು ಧಿಕ್ಕರಿಸುತ್ತಿರುವುದಕ್ಕೆ ಏನೋ ಪ್ರಬಲ ಕಾರಣ ಇರಬಹುದೇನೋ ಎಂಬ ಶಂಕೆ ಮೂಡುತ್ತಿದೆ.

ಅದೇನೇ ಇರಲಿ, ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು ಅವರೇ ತಾವರೆಕೆರೆ ಕೊಪ್ಪಲು ಗ್ರಾಮದ ಒಂದು ಕಿಲೋ ಮೀಟರ್ ರಸ್ತೆಗೆ ಮತ್ತೊಮ್ಮೆ ಕಾಮಗಾರಿ ಆರಂಭಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಿ. ಬೇಗ ರಸ್ತೆ ಕಾಮಗಾರಿ ಪೂರ್ಣಗೊಳಿಸಲಿ ಎಂದು ಗ್ರಾಮಸ್ಥರು ಒತ್ತಾಯಪೂರ್ವಕ ವಿನಂತಿ ಮಾಡಿದ್ದಾರೆ.

ಅಧಿಕಾರಿಗಳ ನಿರ್ಲಕ್ಷ್ಯ : ಭತ್ತದ ಬೆಳೆ ನಾಶ

ತಾ.ಪಂ. ಸಾಮಾನ್ಯ ಸಭೆಯಲ್ಲಿ ಆರೋಪ

ಬೇಲೂರು : ಕೃಷಿ ಇಲಾಖೆ ಅಧಿಕಾರಿಗಳ ಹಾಗೂ ವಿಜ್ಞಾನಿಗಳ ನಿರ್ಲಕ್ಷ್ಯ ಮತ್ತು ಸೈನಿಕ ಹುಳುವಿನ ಕಾಟದಿಂದ ರೈತರು ಬೆಳೆದಿರುವ ಭತ್ತದ ಬೆಳೆ ಸಂಪೂರ್ಣ ನಾಶವಾಗುತ್ತಿದೆ ಎಂದು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷ ಸೋಮಯ್ಯ ಆರೋಪಿಸಿದರು.

ತಾ.ಪಂ. ಅಧ್ಯಕ್ಷ ಹರೀಶ್ ಅಧ್ಯಕ್ಷತೆಯಲ್ಲಿ ಬುಧವಾರ ಕರೆಯಲಾಗಿದ್ದ ಸಾಮಾನ್ಯ ಸಭೆಯಲ್ಲಿ ವಿಷಯ ಪ್ರಸ್ತಾಪಿಸಿ ಮಾತನಾಡಿದ ಅವರು, ಸೈನಿಕ ಹುಳು ಭತ್ತದ ಗದ್ದೆಯಲ್ಲಿನ ತೆನೆಯನ್ನು ಸಂಪೂರ್ಣವಾಗಿ ತಿಂದು ಹಾಕುತ್ತಿರುವುದರಿಂದ ರೈತರಿಗೆ ಸಾಕಷ್ಟು ನಷ್ಟ ಉಂಟಾಗುತ್ತಿದೆ. ಆದರೂ ಕೃಷಿ ಅಧಿಕಾರಿಗಳು ಹಾಗೂ ವಿಜ್ಞಾನಿಗಳು ಸ್ಥಳಕ್ಕೆ ಹೋಗದೆ ಏನು ಮಾಡುತ್ತಿದ್ದಾರೆ? ಕೃಷಿ ಇಲಾಖೆಯಿಂದ ನೀಡಿದ್ದ ಭತ್ತದ ಬೀಜ ಬೆಳೆದಿರುವ ಸ್ಥಳಗಳಲ್ಲಿ ಮಾತ್ರ ಹೀಗಾಗಿದೆ. ಇದಕ್ಕೆ ಏನು ಪರಿಹಾರ ಎಂದು ಪ್ರಶ್ನಿಸಿದರು.

ಸದಸ್ಯೆ ಸಂಗೀತಾ ಮಾತನಾಡಿ, ಕೃಷಿ ಇಲಾಖೆ ವತಿಯಿಂದ ಬೆಂಗಳೂರಿನಲ್ಲಿ ನಡೆದ ಕೃಷಿ ಮೇಳಕ್ಕೆ ರೈತರನ್ನು ಕರೆದುಕೊಂಡು ಹೋಗಿ ಅವರಿಗೆ ಊಟ ತಿಂಡಿ ಕೊಡಿಸದೆ ಹಾಗೇ ಕರೆದುಕೊಂಡು ಬಂದಿದ್ದೀರಿ. ಕೃಷಿ ಇಲಾಖೆಯಿಂದ ಬಂದ ಹಣವನ್ನು ಏನು ಮಾಡಿದಿರಿ? ಇಲಾಖೆಯ ಸೌಲಭ್ಯಗಳನ್ನು ಯಾರಿಗೆ ಕೊಟ್ಟಿದ್ದೀರಿ ಎಂದು ಪ್ರಶ್ನಿಸಿದರು. *(-4ನೇ ಪುಟಕ್ಕೆ)*

ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ

ಹಾಸನ: ಮಾತೃಪೂರ್ಣ ಯೋಜನೆಯ ಲೋಪದೋಷ ಸರಿಪಡಿಸುವಂತೆ ಹಾಗೂ ಸ್ಥಳೀಯ ಸಮಸ್ಯೆಗಳನ್ನು ನಿವಾರಿಸುವಂತೆ ಆಗ್ರಹಿಸಿ ಸಿಐಟಿಯು ನೇತೃತ್ವದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ಹೇಮಾವತಿ ಪ್ರತಿಮೆ ಬಳಿಯಿಂದ ಹೊರಟ ಪ್ರತಿಭಟನಾಕಾರರು, ಕೆ.ಆರ್. ಪುರಂನಲ್ಲಿರುವ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕಛೇರಿ ಆವರಣಕ್ಕೆ ಆಗಮಿಸಿ ಕೆಲಕಾಲ ಧರಣಿ ನಡೆಸಿದರು. ನಂತರ ಜಿಲ್ಲಾಧಿಕಾರಿ ಕಛೇರಿಗೆ ತೆರಳಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ಕರ್ನಾಟಕದಲ್ಲಿ ಮಹಿಳೆಯರ ಪರಿಸ್ಥಿತಿ ಸುಧಾರಿಸಲು ಅಕ್ಟೋಬರ್ 2 ರಿಂದ ಮಾತೃಪೂರ್ಣ ಯೋಜನೆ ಪ್ರಾರಂಭಿಸಲಾಯಿತು. ಸಮಾಜದ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು ಒತ್ತಡದ ಮಧ್ಯೆಯೂ ಈ ಯೋಜನೆಯ ಈಡೇರಿಕೆಗಾಗಿ ಪ್ರಾಮಾಣಿಕವಾಗಿ ಕರ್ತವ್ಯ ಸಲ್ಲಿಸುತ್ತಿದ್ದಾರೆ. ಆದರೆ ಮಾತೃಪೂರ್ಣ ಯೋಜನೆಯ ಜಾರಿಯಲ್ಲಿ ಹಲವಾರು ಲೋಪದೋಷಗಳು ಇವೆ ಎಂದು ದೂರಿದರು.

ಮಾತೃಪೂರ್ಣ ಅನುಷ್ಠಾನದ ಸಂದರ್ಭದಲ್ಲಿ ಹಲವಾರು ಕಡೆಗಳಲ್ಲಿ ತಾಯಂದಿರು ಕೇಂದ್ರಕ್ಕೆ ಬಂದು ಊಟ ಸೇವಿಸಲು ಸಾರಿಗೆ ಸಮಸ್ಯೆ ಮತ್ತು ಸಂಪ್ರದಾಯಸ್ಥ ಕೌಟುಂಬಿಕ ಕಾರಣಗಳು ಇವೆ. ಇದಕ್ಕೆಲ್ಲಾ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರನ್ನು ಹೊಣೆಗಾರರನ್ನಾಗಿ ಮಾಡಬಾರದು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಇಂದ್ರಮ್ಮ, ಉಪಾಧ್ಯಕ್ಷೆ ವೈ. ಆರ್. ಮಂಜಮ್ಮ, ವೀಣಾ, ವಿಜಯ, ಸಿಐಟಿಯುನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಿ.ಎಲ್.ರಾಘವೇಂದ್ರ ಇತರರು ಪಾಲ್ಗೊಂಡಿದ್ದರು.